# ಕಾಳಜಿಯ ಬಂಧ ಬಿಗಿಯಾಗಿರಲಿ, ಉಸಿರಾಟಕ್ಕೆ ಅವಕಾಶವೂ ಇರಲಿ

ಮಕ್ಕಳ ಬಾಲ್ಯವನ್ನು ಕಡೆದು ಉತ್ತಮ ಶಿಲ್ಪವನ್ನಾಗಿ ರೂಪಿಸುವ ಹೊಣೆಗಾರಿಕೆಯನ್ನು ಹೊತ್ತ ಪೋಷಕರೆಂಬ ಶಿಲ್ಪಿಗಳು ತಮ್ಮ ಮಕ್ಕಳ ಬಾಲ್ಯವನ್ನು ಇಂಚಿಂಚೂ ಆಕ್ರಮಿಸಿಕೊಳ್ಳುತ್ತಿದ್ದಾರೆಯೆ?

■ ಸ್ವಯಂಪ್ರಭಾ



ಮೊನ್ನೆ ಮಾಲತಿ, ತನ್ನ ಮಗಳನ್ನು ಕರೆದುಕೊಂಡು ತವರಿಗೆ ಹೋಗಿದ್ದಳು. ತವರೆಂದರೆ ಮಾಲತಿಗೂ ತುಂಬಾ ಪ್ರೀತಿ. ತಾನು ಬೆಳೆದ ಪರಿಸರವನ್ನು ನೋಡುವುದೇ ಅವಳಿಗೆ ಹಿಗ್ಗು. ಅಲ್ಲಿ ಮರವೇರಿದ್ದು, ಹಳ್ಳಕ್ಕೆ ಬಿದ್ದು ಈಜಿದ್ದು, ಸೌದೆಯನ್ನೆಲ್ಲ ಒಂದೊಂದಾಗಿ ತಂದು ಬಿಸಿನೀರಿನ ಒಲೆಯ ಬಳಿ ಪೇರಿಸಿಟ್ಟಿದ್ದು, ಅಡುಗೆ ಕಲಿತಿದ್ದು, ಸೈಕಲ್ ಏರಿ ಬಿದ್ದಿದ್ದು ಎದ್ದಿದ್ದು... ಹೀಗೆ ಬಾಲ್ಯದ ನೆನಪಿಗೆ ಲಗಾಮುಂಟೇ?

ತನ್ನ ಮಡಿಲಿಗೆ ಕಂದಮ್ಮ ಬಂದು ಒಂದ್ರೈದು ವರ್ಷ ಆಗುವವರೆಗೂ ಮಾಲತಿ ನಿಜಕ್ಕೂ ಅವಳ ಅಮ್ಮನಿಗೇ ಜೋತು ಬಿದ್ದಿದ್ದಳು. ಮಗುವನ್ನು ಹೇಗೆ ಲಾಲನೆ ಪಾಲನೆ ಮಾಡುವುದು ಎಂದು ತಿಳಿಯದ ದಿನಗಳಾದ್ದರಿಂದ ಪ್ರತಿಯೊಂದನ್ನೂ ಅಮ್ಮನ ಬಳಿ ಕೇಳಿ ತಿಳಿದುಕೊಳ್ಳುತ್ತಿದ್ದಳು. ಅವಳಿಗೂ ಅಮ್ಮನಿಗೂ ಕೆಲವೊಮ್ಮೆ ಭಾರೀ ಜಗಳವಾಗುತ್ತಿತ್ತು. 'ಡಾಕ್ಟರು ಹೇಳುವುದನ್ನೆಲ್ಲ ನಂಬಿ ಮಗುವನ್ನು ಬರೀ ಡೆಲಿಕೇಟ್ ಮಾಡಬೇಡ ಮಾಲತಿ' ಎಂದು ಅಮ್ಮ ಆಗಾಗ ಹೇಳುತ್ತಿದ್ದರು. ಈ ಅಮ್ಮನಿಗೆ ವೈದ್ಯರ ಮೇಲೆಯೇ ನಂಬಿಕೆ ಇಲ್ಲವಲ್ಲ ಎಂದು ಮಾಲತಿಯದು ಸಿಡಿಮಿಡಿ. ಅಮ್ಮ ಮಗುವನ್ನು ನಿಭಾಯಿಸುವ ಎಲ್ಲ ರೀತಿಗಳ ಬಗ್ಗೆಯೂ ಅವಳಿಗೆ ಸಹಮತವಿಲ್ಲ. ಈ ಅಮ್ಮನ ಕತೆ ನೋಡಿ – ಬೆಳಿಗ್ಗೆ ಮಗುವಿನ ಉಚ್ಚೆ ವಸ್ತ್ರವನ್ನೆಲ್ಲ ಒಂದು ಬಕೆಟ್‌ಗೆ ಹಾಕಿದವರೇ, ಉಚ್ಚೆಯಲ್ಲಿ ಒದ್ದೆಯಾದ ಒಂದು ಮೆತ್ತನೆಯ ವಸ್ತ್ರವನ್ನು ಬೆರಳಿಗೆ ಸುತ್ತಿ ಮಗುವಿನ ನಾಲಿಗೆಯನ್ನು ಒತ್ತಿ ಒರೆಸುತ್ತಿದ್ದರು. ನಾಲಿಗೆಯ ಮೇಲೆ ಮೂಡುವ ಬೆಳ್ಳನೆಯ ಪದರಕ್ಕೆ ಮಗುವಿನ ಉಚ್ಚೆಯೇ ಮದ್ದು ಎಂದವರು ನಂಬುತ್ತಿದ್ದರು. ಇದೆಲ್ಲ ಮೂಢನಂಬಿಕೆ ಎಂದು ಮಾಲತಿ ಹೇಳಿದರೂ, ಅಮ್ಮ ಮಾತ್ರ ಮಗಳ ಮಾತಿಗೆ ಸೊಪ್ಪು ಹಾಕುತ್ತಿರಲಿಲ್ಲ. ಮಗು ನಾಲ್ಕು ವರ್ಷ ದಾಟಿ ಯುಕೆಜಿಗೆ ಪಾದಾರ್ಪಣೆ ಮಾಡಿದ ಮೇಲೆ, ಅಮ್ಮ–ಮಗಳ ಜಗಳ ಮತ್ತೂ ಜಾಸ್ತಿಯಾಯಿತು. ಈಗಂತೂ ಅಮ್ಮ ಮೊಮ್ಮಗಳ ಕುರಿತು ಸಲಹೆ ನೀಡುವುದನ್ನೇ ಬಿಟ್ಟುಬಿಟ್ಟಿದ್ದರು.

ತವರು ಮನೆ ಜಗಲಿಯ ಮೇಲೆ ಕುಳಿತ ಮಾಲತಿಗೆ ಮಗಳು ನನ್ನಂತೆಯೇ ಅಂಗಳದ ತುಂಬೆಲ್ಲ ಓಡಾಡಲಿ ಎಂದು ಆಸೆ. ಆ ಮರವನ್ನು, ಈ ಬಳ್ಳಿಯನ್ನು, ಹಳ್ಳವನ್ನು ಮಗಳಿಗೆ ತೋರಿಸಿದಳು. 'ಸಾಕು ಮಮ್ಮೀ ಮನೆಗೋಗೋಣ' ಎಂದು ಮೂರನೇ ಕ್ಲಾಸಿನ ಮಗಳು ಹೇಳಿದಾಗ ಮಾಲತಿಗೆ ಠುಸ್ ಎಂದು ಅನಿಸಿಬಿಟ್ಟಿತು. ಪೇಟೆಯಲ್ಲೋ ಓಡಾಡಲು, ಅಡ್ಡಾಡಲು ಜಾಗವೇ ಇರುವುದಿಲ್ಲ. ಇಲ್ಲಿ ಇಷ್ಟೊಂದು ಜಾಗವಿದ್ದರೂ, ಅವಕಾಶಗಳಿದ್ದರೂ ಈ ಮಗಳೇಕೆ ಹೀಗೆ ಮನೆಯೊಳಗೆ ಹೋಗೋಣ ಎನ್ನುತ್ತಿದ್ದಾಳೆ ಎಂದು ಬೇಜಾರು ಮಾಡಿಕೊಂಡಳು.

'ಬದುಕು ಅನೇಕ ಅಭ್ಯಾಸಗಳ ಒಂದು ಸಂಕಲನ' ಎಂಬ ಮಾತನ್ನು ತತ್ವಜ್ಞಾನಿಗಳು ಹೇಳುವುದುಂಟು. ಅದಕ್ಕಾಗಿಯೇ ಅಲ್ಲವೇ, ಬಾಲ್ಯದಲ್ಲಿ ಮಕ್ಕಳಿಗೆ ಒಳ್ಳೆಯ ಅಭ್ಯಾಸಗಳನ್ನೇ ಮಾಡಿಸಿರಿ ಎಂದು 'ಪೇರೆಂಟಿಂಗ್' ಉಪನ್ಯಾಸಗಳು ಪೋಷಕರಿಗೆ ತಿಳಿಹೇಳುವುದು. ಬಾಲ್ಯದಲ್ಲಿ ಅಭ್ಯಾಸವಾಗುವ ನಡವಳಿಕೆ, ಆಹಾರ, ಉಡುಪುಗಳು ಮಕ್ಕಳಿಗೆ ದೊಡ್ಡವರಾದ ಮೇಲೆಯೂ ಆಪ್ಯಾಯಮಾನವೆನಿಸುತ್ತವೆ. ಆದ್ದರಿಂದ ಬಾಲ್ಯವನ್ನೇ ಕಡೆದು ಉತ್ತಮ ಶಿಲ್ಪವನ್ನು ರೂಪಿಸುವ ಹೊಣೆಗಾರಿಕೆ ಪೋಷಕರೆಂಬ ಶಿಲ್ಪಿಗಳ ಹೆಗಲ ಮೇಲಿದೆ ಎಂದು ಹೇಳುತ್ತಾರೆ. ಆದರೆ ಇತ್ತೀಚೆಗಿನ ವರ್ಷಗಳಲ್ಲಿ ಹೀಗೆ ಮಕ್ಕಳ ಬಾಲ್ಯದ ಸಂಪೂರ್ಣ ಹೊಣೆ ಹೊರುವ ಪೋಷಕರು ಮಕ್ಕಳ ಬಾಲ್ಯದ ಇಂಚಿಂಚೂ ಆಕ್ರಮಿಸಿಕೊಂಡು ಬಿಡುತ್ತಿದ್ದಾರೆಯೆ?

ಬಟ್ಟೆ ಕೊಳೆ ಮಾಡಿಕೊಳ್ಳಬೇಡ, ರಸ್ತೆಗೆ ಇಳಿಬೇಡ, ಗ್ರೌಂಡಲ್ಲಿ ದೂಳಿದೆ–ಅಲ್ಲಿ ಆಟವಾಡಬೇಡ, ಮರವೇರಿದರೆ ಬಿದ್ದೀಯೆ... ಜೋಕೆ, ಅಂತಹ ಅಡಾವುಡಿ ಕೆಲಸಗಳಿಗೆಲ್ಲ ಕೈ ಹಾಕಬೇಡ... ಎಂದು ಮಕ್ಕಳಿಗೆ ಅನೇಕ ನಿಬಂಧನೆಗಳನ್ನು ಪೋಷಕರು ತಮಗೆ ಗೊತ್ತಿಲ್ಲದಂತೆಯೇ ರೂಪಿಸಿರುತ್ತಾರೆ. ದೊಡ್ಡ ಕುಟುಂಬಗಳಿದ್ದಾಗ ಪೋಷಕರಿಗೆ ಮಕ್ಕಳತ್ತ ಗಮನ ಹರಿಸಲು ಹೆಚ್ಚು ಸಮಯವಿರುವುದಿಲ್ಲ. ಅಥವಾ ಮಕ್ಕಳು ಕೇವಲ ಅಮ್ಮ ಅಪ್ಪನ ತೆಕ್ಕೆಯಲ್ಲಷ್ಟೇ ಅಲ್ಲದೆ, ಸೋದರ ಸಂಬಂಧಿಕರ ತೆಕ್ಕೆಯಲ್ಲಿಯೂ ಬೆಳೆಯುವ ಅವಕಾಶವಿರುತ್ತದೆ. ಇದು ಒಂದು ರೀತಿಯಲ್ಲಿ ಮಕ್ಕಳಿಗೂ ನಿರಾಳಭಾವ ಕೊಡುತ್ತದೆ, ಪೋಷಕರಿಗೂ ನಿರಾಳ. ಆದರೆ ಪುಟ್ಟ ಕುಟುಂಬದಲ್ಲಿ ಅಮ್ಮ, ಮಕ್ಕಳನ್ನು ಇನ್ನಷ್ಟು ಬಿಗಿಯಾದ ಬಂಧದೊಳಗೆ ನೋಡಿಕೊಳ್ಳಲು ಸಹಜವಾಗಿಯೇ ಸಜ್ಜಾಗಿಬಿಡುತ್ತಾಳೆ. ಕುಟುಂಬದೊಳಗೆ ಸಿಗಬೇಕಾದ ಆರ್ಥಿಕ ಅವಲಂಬನೆಯನ್ನೂ ಆಕೆ ಮಗುವಿನ ಮೇಲೆಯೇ ಇರಿಸಿಕೊಳ್ಳುವುದರಿಂದ, ಮಗುವು ತನಗೆ ಸಹಜವಾದ ತುಂಟಾಟಗಳನ್ನು ಮಾಡುವುದಕ್ಕೆ, ಅನ್ವೇಷಿಸುವುದಕ್ಕೆ 'ತಾವು' ಸಿಗುವುದೇ ಇಲ್ಲ.

ಮಗುವಿಗೆ ವಿಶಾಲ ಪರಿಸರದಲ್ಲಿ ಸಿಗುವ ಮುಕ್ತತೆಯ ಸಾಧ್ಯತೆಯನ್ನು ಪಾಲಕರು ನಿರಾಕರಿಸಬಾರದು. ಪಕ್ಕದ ಮನೆಯಲ್ಲಿ ಒಂದಿಷ್ಟು ಹೊತ್ತು ಆಡುವ ಮಗುವನ್ನು ಬೈಯಬಾರದು. ಬಂಧುಗಳ ಮನೆಯಲ್ಲಿ ಎರಡು ದಿನಗಳ ಕಾಲ ಮಗಳು ಓಡಾಡಿಕೊಂಡು ಬರಲಿ. ರಜೆಯಲ್ಲಿ ಅಜ್ಜಿಯ ಜೊತೆಗೆ ಆರಾಮವಾಗಿರಲಿ. ಮಗುವಿಗೆ ತೊಂದರೆಯಾಗದ ಅಜ್ಜಿಯ ನಂಬಿಕೆಗಳಿಗೆ ಲಗಾಮು ಹಾಕಬೇಕೆಂದೇನಿಲ್ಲ. ಅದು ಅಜ್ಜಿ–ಮೊಮ್ಮಕ್ಕಳ ಬಂಧದ ವರಸೆ. ಈ ವರಸೆಯನ್ನು ಅಮ್ಮಂದಿರು ಸ್ವೀಕರಿಸಿದರೆ ಮಕ್ಕಳೂ ಸ್ವೀಕರಿಸುತ್ತಾರೆ.

ಪ್ರತಿಕ್ರಿಯಿಸಿ: feedback@sudha.co.in